6

# ಸೃಷ್ಟಿಯು ದೇವರನ್ನು ಹೇಗೆ ಚಿತ್ರಿಸುವುದು?

"ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡ" ಜನರ ಆತ್ಮಿಕ ಮನೋಭಾವನೆಯು ಎಂಥಾ ಚಿಂತಾಜನಕವಾದದ್ದಾಗಿದೆಯಲ್ಲವೇ (ರೋಮಾಪುರ 1:23) ಸೃಷ್ಟಿ ಕರ್ತನನ್ನು ಬಿಟ್ಟು ಸೃಷ್ಟಿವಸ್ತುಗಳನ್ನು ಆರಾಧಿಸಿ, ಅವುಗಳ ಸೇವೆ ಮಾಡುತ್ತಿರುವುದು ಎಷ್ಟು ದುಃಖಕರವಾದದ್ದಾಗಿದೆಯಲ್ಲವೇ!

ಫಿಲಿಷ್ಟಿಯರು ದೇವರನ್ನು ಸಮಾಧಾನಪಡಿಸಲು ಐದು ಚಿನ್ನದ ಗಡ್ಡೆಗಳನ್ನೂ ಐದು ಚಿನ್ನದ ಇಲಿಗಳನ್ನೂ ಆತನಿಗೆ ಸಮರ್ಪಿಸಲು ಪ್ರಯತ್ನಿಸಿದ್ದನ್ನು ಓದುವಾಗ ಒಬ್ಬನ ಹೃದಯಕ್ಕೆ ಎಷ್ಟು ದುಃಖವಾಗುವದಲ್ಲವೇ (ನೋಡಿರಿ 1 ಸಮುವೇಲ 6:2-5).

ಸಿರಿಯನ್ನರ ಮನಸ್ಸುಗಳಲ್ಲಿ ದೈವತ್ವವು ಅತಿಯಾಗಿ ಮಿತಿಯುಳ್ಳದ್ದೂ ವಿರೂಪಗೊಳಿಸಲ್ಪಟ್ಟದ್ದೂ ಆಗಿತ್ತು. ಒಬ್ಬ ದೇವರು ಬೆಟ್ಟಗಳ ನಿಯಂತ್ರಣದಲ್ಲಿರುವವನು ಮತ್ತು ಇನ್ನೊಬ್ಬನು ಕಣಿವೆಗಳ ನಿಯಂತ್ರಣದಲ್ಲಿರುವವನು ಎಂದು ಅವರು ಯೋಚಿಸಿದರು.

## ವಿವೇಕದಿಂದ ದೇವರನ್ನು ತಿಳಿಯುವುದು

ಸರಿಯಾದ ಮಾಹಿತಿಕೊಡಲ್ಪಟ್ಟಾಗ, ಜನರು ಕೇವಲ ಮಾನವ ವಿವೇಚನೆಯಿಂದ ನಿಜವಾದ ದೇವರ ಅಸ್ತಿತ್ವವನ್ನು ತಿಳಿಯಲು ಶಕ್ತರಾಗುವರು. ಬೈಬಲ್ ಇಲ್ಲದೆಯೂ ಸಹ, ಆತನ ಬಗ್ಗೆ ಅವರು ಸಂಗತಿಯನ್ನು ತಿಳಿಯಬಲ್ಲರು.

### ಆತನು ಸೃಷ್ಟಿಕರ್ತನು

ಒಬ್ಬ ಯಾತ್ರಿಕನು ಯು. ಎಸ್. ಪ್ರಸಿಡೆಂಟರ ನಿವಾಸವಾದ ವೈಟ್ ಹೌಸಿನಲ್ಲಿ ನಡೆಯುವಾಗ, ಆ ಅದ್ಭುತಕರವಾದ ನಿವಾಸಸ್ಥಾನವನ್ನು ಯಾರೋ ಕಟ್ಟಿದರು ಎಂದು ಹೇಳ ಬೇಕಾಗಿರುವದಿಲ್ಲ. ಅಂಥ ವಿಷಯದಲ್ಲಿ ವಿವೇಕವುಳ್ಳ ಯಾವ ಮನುಷ್ಯನೂ ಬೇರೆಯಾಗಿ ಯೋಚಿಸುವದಿಲ್ಲ. ಮಾಡಲ್ಪಟ್ಟ ವಸ್ತುವಿಗೆ ನಿರ್ಮಾಪಕನು ಇರುವನೆಂಬುದನ್ನು ಜಾಯ್ಸ್ ಕಿಲ್ಮರ್ ಅವರು ಜಾಣ್ಮೆಯಿಂದ ಸುಂದರವಾಗಿ ಹೇಳಿದಂತೆ ಬೇರೆಯಾರೂ ಹೇಳಿರುವದಿಲ್ಲ.

ನಾನೆಂದೂ ನೋಡಲಾರನೆಂದು ಯೋಚಿಸುವೆನು
ಒಂದು ಮರದಷ್ಟು ಚೆಂದವಾಗಿರುವ ಕವಿತೆಯನ್ನು;
ಒಂದು ಮರವು ಬೇಸಿಗೆ ಕಾಲದಲ್ಲಿ

ತನ್ನ ತಲೆಗೂದಲಲ್ಲಿ ರೊಬಿನ್‌ಗಳ ಗೂಡನ್ನು ಧರಿಸಿದ್ದನ್ನು.
ಎದೆಯ ಮೇಲೆ ಹಿಮ ಬಿದ್ದ ಒಂದು ಮರವನ್ನು,
ಮಳೆಯೊಂದಿಗೆ ನಿಕಟವಾಗಿ ಜೀವಿಸುತ್ತಿರುವದನ್ನು;
ಭೂಮಿಯ ಸಿಹಿ ಹರಿಯುವ ಸ್ತನಕ್ಕೆ
ಹಸಿದ ಬಾಯಿಯನ್ನು ಒತ್ತಿದ ಮರವನ್ನು

ದಿನವೆಲ್ಲ ದೇವರ ಕಡೆಗೆ ನೋಡುವ ಒಂದು ಮರ
ಎಲೆಗಳ ತೋಳುಗಳನ್ನು ಪ್ರಾರ್ಥಿಸಲು ಮೇಲೆತ್ತುವುದು
ನನ್ನಂಥ ಮೂರ್ಖನಿಂದ ಪದ್ಯಗಳು ಮಾಡಲ್ಪಟ್ಟಿರುವವು
ಆದರೆ ಒಂದು ಮರವನ್ನು ದೇವರು ಮಾತ್ರವೇ ಮಾಡಬಲ್ಲನು.[1]

**ಆತನು ಅತಿಮಾನವನಾಗಿದ್ದಾನೆ**

ಮಾನವ ಜೀವಿಗಳು ಯಾರೋ ಒದಗಿಸಿದ ಸಲಕರಣೆಗಳನ್ನು ಉಪಯೋಗಿಸಿ, ಭವ್ಯವಾದ ಗಗನಚುಂಬೀ ಕಟ್ಟಡಗಳನ್ನೂ ಧ್ವನಿಗಿಂತ ಹೆಚ್ಚು ವೇಗವುಳ್ಳ ವಿಮಾನಗಳನ್ನೂ ರಚಿಸಿದ್ದಾರೆ, ಹಾಗಿದ್ದರೂ, ಮಾನವ ಜೀವಿಗಳು ಲೋಕವನ್ನು ಕಟ್ಟುವ ವ್ಯವಹಾರದಲ್ಲಿ ಸಾಹಸ ಮಾಡಿರುವದಿಲ್ಲ. ವಿಶ್ವವನ್ನು ರೂಪಿಸುವವರು ನಮಗೆ ತಿಳಿದಿರುವ ಪ್ರಕಾರವಾಗಿ ಅತಿಮಾನವರಾಗಿರತಕ್ಕದ್ದು. ಸ್ಪಷ್ಟವಾಗಿ, ಸೃಷ್ಟಿಸುವ ದೇವರು ಮಾನವ ಜೀವಿಗಳಿಗಿಂತ ಅಪರಿಮಿತವಾಗಿ ಎಷ್ಟೋ ಶ್ರೇಷ್ಠನಾಗಿದ್ದಾನೆ.

**ಆತನು ಮಹಾ ಬಲವುಳ್ಳವನಾಗಿದ್ದಾನೆ**

ಭಾರವುಳ್ಳ ಗ್ರಹಗಳ ಬಗ್ಗೆ ಒಬ್ಬನು ಓದುವಾಗ (ನಮ್ಮ ಭೂಮಿಯ ತೂಕ 6,592,000,000,000,000,000,000 ಟನ್ಸ್). ಅದೃಶ್ಯವಾದ ಕೈಯ ಬಲದಿಂದ ಎತ್ತಿಹಿಡಿಯಲ್ಪಟ್ಟಿರುವದನ್ನು ನೋಡುವಾಗ, ಅವನು ದೇವರು ಸರ್ವಶಕ್ತನಾಗಿದ್ದಾನೆಂದು ಬೈಬಲಿನಿಂದ ಹೇಳಲ್ಪಡುವ ಅವಶ್ಯಕತೆವುಳ್ಳವನಾಗಿರುವದಿಲ್ಲ, ದೇವರಿಗೆ ಸ್ಪಷ್ಟವಾಗಿ ಇರುವಷ್ಟು ಬಲವು ಯಾರಿಗೆ ಇರಬಹುದು ಎಂಬುದನ್ನು ಕಲ್ಪಿಸುವುದೂ ಮಾನವ ಜೀವಿಗಳಿಗೆ ಕಷ್ಟಕರವಾದದ್ದಾಗಿರುತ್ತದೆ.

**ಆತನು ಕ್ರಮವುಳ್ಳಾತನು**

ಪುನಃ ಪುನಃ ಸಂಭವಿಸುವ ಹಗಲು ಮತ್ತು ರಾತ್ರಿ, ಬೇಸಿಗೆ ಕಾಲ ಮತ್ತು ಚಳಿಗಾಲ ಹಾಗೂ ಮುಂದಿಳಿಸಬಲ್ಲ ಗ್ರಹಣಗಳ ಸರಿಯಾದ ಸಂಭವಿಸುವಿಕೆ ಇವುಗಳನ್ನು ಗಮನಿಸುವಾಗ ಹೀಗೆ ಹೇಳಬೇಕಾಗುತ್ತದೆ: "ನಾನು ಎಂದೂ ದೇವರನ್ನು ನೋಡಿರದಿದ್ದರೂ, ಆತನು ಕ್ರಮವಿಲ್ಲದವನಾಗಿರುವದಿಲ್ಲ ಎಂದು ನಾನು ಬಲ್ಲೆನು; ಆತನು ಕ್ರಮದ ಮತ್ತು ನಿಯಮದ ದೇವರು ಆಗಿದ್ದಾನೆ ಎಂದು ಬಲ್ಲೆನು."

**ಆತನು ಒಬ್ಬನೇ ಆಗಿದ್ದಾನೆ**

ಒಬ್ಬನು ಕ್ರಮವಾಗಿ ಇಟ್ಟ ಮನೆಯೊಳಗೆ ನಡೆದಾಡುವಾಗ, ಅದೃಶ್ಯನಾದ ಮನೆಯನ್ನು ಓರಣವಾಗಿ ಇಟ್ಟವನ ಬಗ್ಗೆ ಮಾತ್ರವಲ್ಲದೇ, ಒಬ್ಬರಿಗೊಬ್ಬರು ವಿರುದ್ಧವಾಗಿ ಕೆಲಸ ಮಾಡುವ ಇಬ್ಬರು ಮನೆಯ ವ್ಯವಸ್ಥಾಪಕರು ಇರುವದಿಲ್ಲ ಎಂಬುದನ್ನೂ ತಿಳಿದುಕೊ

ಳ್ಳುತ್ತಾನೆ. ಆ ಮನೆಯವನಿಗೆ ಎಷ್ಟು ಜನ ಸಹಾಯಕರು ಇರುವರು ಎಂಬುದನ್ನು ಅವನು ತಿಳಿದುಕೊಳ್ಳಲಿಕ್ಕಿಲ್ಲ, ಆದರೆ ಒಂದು ಮನಸ್ಸಿನ, ಒಂದು ನಿರ್ದೇಶನದ ಪುರಾವೆಯನ್ನು ಮನೆಯಲ್ಲೆಲ್ಲಾ ನೋಡುತ್ತಾನೆ. ಹಾಗೆಯೇ, ನಿಸರ್ಗದಲ್ಲಿ, ನಿಯಮಗಳು ಮತ್ತು ವ್ಯವಸ್ಥಾಪನೆಗಳ ಸಾಮಾರಸ್ಯವು ದೇವರು ಒಬ್ಬನೇ ಇದ್ದಾನೆ ಮತ್ತು ಆತನಿಗೆ ಒಂದು ಮನಸ್ಸಿದೆ ಎಂಬುದನ್ನು ಶುದ್ಧಕಾರಣವು ಭರವಸೆಕೊಡುತ್ತದೆ.

**ದೇವರು ಒಳ್ಳೆಯವನಾಗಿರುತ್ತಾನೆ**

ಮಾನವ ದೃಷ್ಟಿಕೋನದಿಂದ, ಸೃಷ್ಟಿಯಲ್ಲಿ ಕೆಲವು ವಿಪರ್ಯಾಸವಾದ ಸಂಗತಿಗಳು - ಬಿರುಗಾಳಿಗಳು, ರೋಗ, ಹಾಗೂ ಮರಣ ಇಂಥವುಗಳು ವಿವರಿಸಲಿಕ್ಕಾಗದಂಥವುಗಳಾಗಿರುತ್ತವೆ. ಹೀಗಿದ್ದರೂ, ಅಸಂತುಷ್ಟವಾದ ಈ ಎಲ್ಲಾ ಸಂಗತಿಗಳಿಗಿಂತ ಹೆಚ್ಚಾಗಿ, ಮನುಷ್ಯನ ಹಿತಕ್ಕಾಗಿ ಚಿಂತಿಸುವಾತನು ಇದ್ದಾನೆಂಬುದಕ್ಕೆ ಅಸಂಖ್ಯಾತವಾದ ಪುರಾವೆಗಳಿರುತ್ತವೆ. ಬಿತ್ತುವದಕ್ಕಾಗಿ ಬೀಜವನ್ನು, ಆಹಾರಕ್ಕಾಗಿ ರೊಟ್ಟಿಯನ್ನು, ಆಕಾಶದಿಂದ ಮಳೆಯನ್ನು, ಮತ್ತು ಆಹಾರ ಮತ್ತು ಸಂತೋಷದಿಂದ ಹೃದಯಗಳನ್ನು ತುಂಬಿಸುವ ಫಲಭರಿತ ಕಾಲಗಳನ್ನು ಒದಗಿಸಲಿಕ್ಕೆ ಒಬ್ಬಾತನು ಒಳ್ಳೆಯವನೂ ದಯೆಯುಳ್ಳವನೂ ಆಗಿರಬೇಕಾಗುತ್ತದೆ. ಅಂಥ ದಯೆಯುಳ್ಳ ದೇವರ ಕೃತ್ಯಗಳ ಗುರುತುಗಳು ಒಬ್ಬ ದುಷ್ಟ ದೇವರಿಂದ ಬರುವದಿಲ್ಲವಾದುದರಿಂದ, - ಕೆಡುಕಿ ಉತ್ತರವಿಲ್ಲದ ಸಮಸ್ಯೆಯನ್ನು ಹಿಡಿದು ಕೊಂಡಿದ್ದರೂ - ದೇವರು ಒಳ್ಳೆಯವನಾಗಿದ್ದಾನೆ ಎಂದು ಹೇಳಲು ಒಬ್ಬನು ಒತ್ತಾಯ ಪಡಿಸಲ್ಪಡುತ್ತಾನೆ.

**ಆತನು ಸೌಂದರ್ಯವನ್ನು ಪ್ರೀತಿಸುತ್ತಾನೆ**

ಒಳ್ಳೆಯತನದ ಪುರಾವೆಗಳೊಂದಿಗಿರುವಂತೆ, ದೇವರು ಸೌಂದರ್ಯವನ್ನು ಪ್ರೀತಿಸುತ್ತಾನೆ ಎಂಬ ಪುರಾವೆಗಳೊಂದಿಗೆ ನಿಸರ್ಗವು ತುಂಬಿಕೊಂಡಿರುತ್ತದೆ. ನಿಸರ್ಗದಲ್ಲಿ ಕುರೂಪದ ಕೆಲವು ಪುರಾವೆಗಳು ಕಂಡು ಬಂದರೂ - ವಿವೇಚನೆಯಿಂದ ಅವುಗಳಲ್ಲಿ ಕೆಲವನ್ನು ವಿವರಿಸಲಿಕ್ಕಾಗದಿದ್ದರೂ - ನಿಸರ್ಗದ ಸೌಂದರ್ಯವು, "ದೇವರು ಸುಂದರವಾದ ಸಂಗತಿಗಳನ್ನು ಪ್ರೀತಿಸುತ್ತಾನೆ!" ಎಂದು ಹೇಳುವದನ್ನು ತಡೆಹಿಡಿಯಲಾರದಷ್ಟು ಮಿತಿಮೀರಿದ್ದಾಗಿದೆ. ಗುಲಾಬಿ ಹೂವು ಬಣ್ಣವಿಲ್ಲದೆ, ಸುವಾಸನೆಯಿಲ್ಲದೇ ಚೌಕಾಗಿ ಮಾಡಲ್ಪಡಬಹುದಿತ್ತು. ಕೋಗಿಲೆಗಳು ಧ್ವನಿಯಿಲ್ಲದವುಗಳಾಗಿ ಮಾಡಲ್ಪಡಬಹುದಿತ್ತು; ಕಣ್ಣುಗಳು ಮಿನುಗುವಿಕೆಯಿಲ್ಲದೇ ತುಟಿಗಳು ಮುಗುಳ್ನಗೆ ಇಲ್ಲದೇ ಮಾಡಲ್ಪಡಬಹುದಿತ್ತು. ಪುನಃ ಕೆಲವು ಪ್ರಶ್ನೆಗಳು ಉತ್ತರಗಳಿಲ್ಲದವುಗಳಾಗಿದ್ದಾಗ್ಯೂ, ದೇವರು ಸೌಂದರ್ಯವನ್ನು ಪ್ರೀತಿಸುತ್ತಾನೆ ಎಂದು ಹೇಳುವದಕ್ಕೆ ವಿಪುಲವಾದ ಪುರಾವೆಯು ಒಬ್ಬನನ್ನು ಒತ್ತಾಯಿಸುತ್ತದೆ.

**ಆತನು ನೀತಿ ತತ್ವದವನಾಗಿದ್ದಾನೆ**

ಮನುಷ್ಯನ ದೇಹಕ್ಕೆ ಒಬ್ಬ ನಿರ್ಮಾಣಿಕನಿರುವಂತೆಯೇ ಮನುಷ್ಯನ ಮನಸಾಕ್ಷಿಗೆ ಒಬ್ಬ ನಿರ್ಮಾಣಿಕನು ಇರಲೇ ಬೇಕು. ಸತ್ತ ಭೌತದ್ರವ್ಯವು ಸರಿಯಾದ ಮತ್ತು ತಪ್ಪಾದ ಭಾವನೆಯನ್ನು ಹುಟ್ಟಿಸುವುದು ಅಗ್ರಾಹ್ಯವಾದದ್ದಾಗಿರುವುದು; ಹಾಗೆಯೇ ಮನಸ್ಸಾಕ್ಷಿಯನ್ನು ಉಂಟುಮಾಡಿದ ದೇವರಿಗೆ ಸರಿಯಾದದ್ದರ ಮತ್ತು ತಪ್ಪಾದದ್ದರ ಭಾವನೆಯಿಲ್ಲದಿರುವಂಥದ್ದು ಅಗ್ರಾಹ್ಯವಾದದ್ದಾಗಿದೆ. ಇಲ್ಲಿ ಪುರಾವೆಯು ಸ್ಪಷ್ಟವಾಗಿದೆ:

ಮರ್ತ್ಯ ಮಾನವನಿಗೆ ದೇವರು ಕಾಣದವನಾಗಿದ್ದರೂ ಮಾನವನು ತನ್ನ ನಿರ್ಮಾಣಿಕನು ನೀತಿ ತತ್ವದವನಾಗಿದ್ದಾನೆಂದು ತಿಳಿದಿರುತ್ತಾನೆ.

## ಪ್ರಕಟನೆಯಿಂದ ದೇವರನ್ನು ತಿಳಿಯುವುದು

ನಿಸರ್ಗದ ಬೆಳಕಿನಿಂದ ದೇವರ ಬಗ್ಗೆ ಅನೇಕ ಸತ್ಯಗಳನ್ನು ಭರವಸೆಯಿಂದ ತಿಳಿಯಬಹುದಾಗಿರುವಾಗ, ದೇವರನ್ನು ಹೇಗೆ ಸೇವಿಸಬೇಕು ಎಂಬುದು ಬೆಟ್ಟದ ಪಕ್ಕದಲ್ಲಿ ಎಲ್ಲಿಯೂ ಬರೆಯಲ್ಪಟ್ಟಿರುವದಿಲ್ಲ ಇಲ್ಲವೇ ಆಕಾಶದಲ್ಲಿ ಹೊಳೆಯಲ್ಪಟ್ಟಿರುವದಿಲ್ಲ. ವಿಶೇಷ ಪ್ರಕಟನೆಯಿಲ್ಲದೇ ಮಾನವ ಮೂಲದ ಬಗ್ಗೆ ಒಬ್ಬನು ಏನನ್ನಾದರೂ ತಿಳಿಯಬಹುದು, ಆದರೆ ಅವನು ಮನುಷ್ಯನ ಕರ್ತವ್ಯವನ್ನು ಅಥವಾ ಮನುಷ್ಯನ ಅಂತ್ಯಸ್ಥಿತಿಯನ್ನು ತಿಳಿದುಕೊಳ್ಳಲಾರನು, ಧಾರ್ಮಿಕವಾಗಿ ಮಾನವನ ಮಾರ್ಗವು ಅವನಲ್ಲಿ ಇರುವದಿಲ್ಲ.

ನಿಸರ್ಗವು ಸಹಜವಾಗಿ ಮಾನವನ ಅಗತ್ಯತೆಗಳನ್ನು ಮುನ್ನೋಡಿತು, ಮತ್ತು ಅವುಗಳ ತೃಪ್ತಿಗಾಗಿ ವ್ಯವಸ್ಥೆಗಳನ್ನು ಮಾಡಿತು. ಪುಪ್ಪುಸಗಳಿಗಾಗಿ ಗಾಳಿಯನ್ನೂ, ಹೊಟ್ಟೆಗಳಿಗಾಗಿ ಆಹಾರವನ್ನೂ ಮತ್ತು ಏಕಾಂಗಿತನಕ್ಕೆ ಪತ್ನಿಯರನ್ನೂ ಒದಗಿಸಿತು. ಇಷ್ಟು ಕರುಣೆಯುಳ್ಳ ನಿಸರ್ಗವು ಮನುಷ್ಯನ ಧಾರ್ಮಿಕ ಅಗತ್ಯತೆಗಳನ್ನು ತೃಪ್ತಿಪಡಿಸದೇ ಇರುವದಿಲ್ಲ. ಮಾನವತೆಗಾಗಿ ನಿಸರ್ಗವು ಅಷ್ಟನ್ನು ಮಾಡುತ್ತದೆ, ಮನುಷ್ಯನ ಅತಿದೊಡ್ಡ ಅಗತ್ಯತೆಗೆ ಸಂತೃಪ್ತಿಯು ಲಭ್ಯವಿರದಿದ್ದರೆ ಒಬ್ಬನು ಬಹಳ ಆಶ್ಚರ್ಯಪಡಬಹುದು.

ಒಬ್ಬನು ನಿರೀಕ್ಷಿಸುವಂತೆ, ದೇವರು ಮನುಷ್ಯನಿಗೆ ವಿಶೇಷವಾದ ರೀತಿಯಲ್ಲಿ ತನ್ನನ್ನು ಪ್ರಕಟಿಸಿಕೊಂಡಿದ್ದಾನೆ ಎಂಬುದನ್ನು ನಂಬಲರ್ಹ ಚರಿತ್ರೆಯು ದೃಢಪಡಿಸುತ್ತದೆ. ಮೊದಲು ಇದು ಮೌಖಿಕವಾದ ರೀತಿಯಲ್ಲಿ ಸಂಭವಿಸಿತು, ಆಮೇಲೆ ಕನಸುಗಳ ಮತ್ತು ದರ್ಶನಗಳ ಮುಖಾಂತರ, ಅನಂತರ ಕಲ್ಲಿನ ಮೇಲೆ ಬರೆದ ನಿಯಮಗಳ ಮುಖಾಂತರ, ತರುವಾಯ ನಿಯಮಗಳ ಲಿಖಿತ ಪುಸ್ತಕದಲ್ಲಿ ಸಂಭವಿಸಿತು. ಮನುಷ್ಯನು ತನ್ನಿಂದ ತಾನೇ ತಿಳಿಯಲಾರದ್ದನ್ನು ಕ್ರಮೀಣವಾಗಿ ಅವನಿಗೆ ದೇವರು ತಿಳಿಯುವಂತೆ ಮಾಡಿದನು. ಅಂತಿಮವಾಗಿ, ದೇವರ ದೂರದೃಷ್ಟಿ, ಒಳ್ಳೆಯತನ, ಬಲ ಮತ್ತು ಪ್ರೀತಿ ಒಂದಾಗಿ, ತನ್ನನ್ನು ಮಾನವ ಜೀವಿಯನ್ನಾಗಿ ಮಾಡಿಕೊಳ್ಳುವದರಲ್ಲಿ ಪ್ರಕಟವಾಗಿರುತ್ತದೆ, ಆತನು ಇಮ್ಮಾನುವೇಲ್ "ದೇವರು ನಮ್ಮೊಂದಿಗೆ ಇದ್ದಾನೆ" ಆಗಲು ಇಷ್ಟವುಳ್ಳವನಾದನು. ಇದಲ್ಲದೆ, ಆತನು ತನ್ನನ್ನು *Go'el,* ವಿಮೋಚಕನು, ನಮ್ಮ ನ್ಯೂನತೆಗಳಿಗಾಗಿ ಪರಿಹಾರದಂತೆ ನಮ್ಮೆಲ್ಲರಿಗಾಗಿ ಪ್ರಾಣಕೊಡಲು ಆತನು ಸಿದ್ಧನಾದನು. ಆತನು ಪುನರುತ್ಥಾನವೂ ಜೀವವೂ - ಸಮೃದ್ಧ ಜೀವವೂ ಆದದ್ದನ್ನು ಓದುವಾಗ ನಮಗೆಷ್ಟೋ ಸಂತೋಷವಾಗುತ್ತದಲ್ಲವೇ!

## ಮುಕ್ತಾಯ

ಮನುಷ್ಯನ ಮೂಲ, ಕರ್ತವ್ಯ ಮತ್ತು ಮಹಿಮೆಯ ನಿರೀಕ್ಷೆಯನ್ನು ಸಂಪೂರ್ಣವಾಗಿ ಪ್ರಕಟಿಸಿದಾತನ ಬಳಿಗೆ ಸಾಮಾನ್ಯ ಮಾನವ ಹೃದಯಗಳು ಎಳೆಯಲ್ಪಟ್ಟಿವೆ. ಅವರು ಶಿಲುಬೆಯ ಚಮತ್ಕಾರದಿಂದ ಹಿಡಿಯಲ್ಪಟ್ಟಿದ್ದಾರೆ ಮತ್ತು ಪುನರುತ್ಥಾನದ ಪ್ರಭಾವದಿಂದ ಮೇಲೆತ್ತಲ್ಪಟ್ಟಿದ್ದಾರೆ. ನಿಸರ್ಗದಲ್ಲಿ ಉತ್ತಮವಾದ ಮತ್ತು ಸುಂದರವಾದ ವರಗಳು ಅತಿಶ್ರೇಷ್ಠ ಅಗಾಪೆಯಿಂದ, ಪ್ರೀತಿಯ ಅತೀ ದೊಡ್ಡ ರೂಪದಿಂದ ಸುತ್ತುವರಿಯಲ್ಪಟ್ಟಿದ್ದಾರೆ. ಇದು ನಿತ್ಯಜೀವವಾಗಿರುತ್ತದೆ: ಒಬ್ಬನೇ ನಿಜವಾದ

ದೇವರನ್ನು ಮತ್ತು ಆತನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನು ತಿಳಿದುಕೊಳ್ಳುವುದು. ಆತನು ನಾವು ಆರಾಧಿಸುವ ದೇವರಾಗಿದ್ದಾನೆ.

---

ಟಿಪ್ಪಣಿ

[1]Joyce Kilmer, *TREES & Other Poems* (Garden City, N.Y.: Doubleday & Co., 1914), 19.

© 2009 Truth for Today